## APPLICATION UNDER RIGHT TO INFORMATION ACT, 2005

Date: 24/08/2020
Place: Chitradurga

To,

Mr. V. Rajesh,
General Manager, CPIO & the Public Information Officer,
The Power Grid Corporation of India Ltd.,
Southern Region Transmission System - II RHQ,
Near RTO Driving Test Track, Singanayakanahalli,
Yalahanka Hobali, Bangalore - 560 064.

Dear Sir/Madam,

**Subject: Application for seeking information under Right to Information Act, 2005**

*************

I Mr. Madhu N R, Advocate wish to seek below stated information:

That Your Organization has drawn/is drawing 400 KV high tension line in the district of Tumakuru. In respect of the same the Deputy Commissioner, Tumakuru has passed an order bearing No.MAG(1)CR:159/2016-17 dated 23.08.2016 whereby they have determined the compensation payable to the farmers upon whose lands you have drawn/drawing the said high tension line.

In respect of the same kindly **confirm whether your Company/Organisation is paying the compensation to the aggrieved farmers as determined by the Deputy Commissioner, Tumakuru vide their order dated 23.08.2016.**

Note: A copy of the Order dated 23.08.2016 passed by the Deputy Commissioner, Tumakuru is attached for your kind reference.

I hereby inform you that the following formalities have been completed by me:

A. That I have annexed the Postal Order bearing No. 48F 656809 for an amount of Rs.10/- in your favour dated 29.05.2019.
B. That I am the Citizen of India seeking information in the said capacity.

Request you to send all the information sought by me at the earliest.

Yours faithfully,

Madhu N.R

1130

(Mr. Madhu. N. R)
Advocate
Address: Srigandha Nilaya, 1st Floor,
1st Cross, Sangameshwara Layout,
Behind Akashavani,
Kelagote, Chitradurga - 577 501
Mobile: 9513317555

ಪವರ್‌ಗ್ರಿಡ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿ. ಇವರ ವತಿಯಿಂದ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ನಿರ್ಮಾಣ ಮಾಡಲಿರುವ ವಿವಿಧ 400ಕೆವಿ, ವಿದ್ಯುತ್ ಪ್ರಸರಣ ಮಾರ್ಗಗಳ ಕಾಮಗಾರಿ ಕೆಲಸ ಮಾಡುವ ಸಂಬಂಧ ಜಿಲ್ಲಾಧಿಕಾರಿ ಹಾಗೂ ಜಿಲ್ಲಾದಂಡಾಧಿಕಾರಿ, ತುಮಕೂರು ಜಿಲ್ಲೆ ಇವರ ಕಛೇರಿ ಆದೇಶ.

ಸಂಖ್ಯೆ: ಎಂಎಜಿ(1)ಸಿಆರ್159/2016-17 ದಿನಾಂಕ:23-08-2016.

ಪೀಠಿಕೆ

01. ಪವರ್‌ಗ್ರಿಡ್ ಕಾರ್ಪೋರೇಶನ್ ಆಫ್ ಇಂಡಿಯಾ ಲಿ. ಇವರು ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ನಾಗಲಮಡಿಕೆ ಹೋಬಳಿ, ಕ್ಯಾತಗಾನಚರ್ಲು ಗ್ರಾಮದಲ್ಲಿ ಸೋಲಾರ್ ಸ್ಥಾವರಗಳಿಂದ ಉತ್ಪಾದಿಸುತ್ತಿರುವ ವಿದ್ಯುತ್‌ಚಕ್ತಿಯನ್ನು 400 ಕೆವಿ ಡಬಲ್ ಸರ್ಕಿಟ್ ಮತ್ತು ಮಲ್ಟಿ ಸರ್ಕಿಟ್ ಮೂಲಕ ಬೇರೆ ಕಡೆಗೆ ಈ ಕೆಳಕಾಣಿಸಿದ ಪ್ರಸರಣ ಮಾರ್ಗಗಳನ್ನು ನಿರ್ಮಿಸಲು ಉದ್ದೇಶಿಸಿ ದಿನಾಂಕ:13-07-2016ರ ಪತ್ರದಲ್ಲಿ ಸಂಬಂಧಪಟ್ಟ ಜಮೀನಿನ ಭೂಮಾಲೀಕರಿಗೆ ಪರಿಹಾರವನ್ನು ನಿಗದಿಪಡಿಸಿಕೊಡುವಂತೆ ಕೋರಿರುತ್ತಾರೆ.

ಅ) ಪಾವಗಡ -ಹಿರಿಯೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ.

ಆ) ಗುತ್ತಿ-ತುಮಕೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಾರ್ಗ.

ಇ) ಬಳ್ಳಾರಿ-ತುಮಕೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಲ್ಟಿ ಸರ್ಕಿಟ್ ಮಾರ್ಗ.

02. ಸದರಿ ಕಂಪನಿಯವರು ದಿನಾಂಕ:16-08-2016ರಂದು ಮನವಿ ಸಲ್ಲಿಸಿ ಟವರ್‌ಗಳ ಅಡಿಪಾಯದ ವಿಸ್ತೀರ್ಣದ ಬಗ್ಗೆ, ಕಾರಿಡಾರ್‌ನ ಅಗಲದ ಬಗ್ಗೆ ಹಾಗೂ 400 ಕೆವಿ ಡಬಲ್ ಸರ್ಕಿಟ್ ಮತ್ತು ಮಲ್ಟಿ ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ ಹಾದುಹೋಗುವ ತಾಲ್ಲೂಕು ಮತ್ತು ಹತ್ತಿರದ ಗ್ರಾಮಗಳ ವಿವರಗಳ ಮಾಹಿತಿಯನ್ನು ಈ ಕೆಳಕಾಣಿಸಿದಂತೆ ಸಲ್ಲಿಸಿರುತ್ತಾರೆ.

ಅ) ಪಾವಗಡ -ಹಿರಿಯೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ.

| ಕ್ರ.ಸಂ | ತಾಲ್ಲೂಕು | ಗ್ರಾಮ |
|---|---|---|
| 01. | ಪಾವಗಡ | ಕ್ಯಾತಗಾನಚರ್ಲು, ವಡ್ಡರೇವು, ದಳವಾಯಿಹಳ್ಳಿ, ಪಾಪಾಜಿ ನಾಯಕನತಾಂಡ, ಬಬೂರಿನಾಯಕನತಾಂಡ, ಹೊಸಹಳ್ಳಿತಾಂಡ, ಕೆಂಚಗಾನಹಳ್ಳಿ, ಗಂಗಸಾಗರ, ಹರೇಕ್ಯಾತನಹಳ್ಳಿ, ಕಮರಲಹಳ್ಳಿ, ಕೋಟಗುಡ್ಡ, ಹನುಮಂತಪುರ, ರಾಮಯ್ಯನಪಾಳ್ಯ, ಬಡಸನಹಳ್ಳಿ, ಗುಜ್ಜರಹಳ್ಳಿ ಮತ್ತು ಗೋಟನಕುಂಟೆ. |

ಆ) ಗುತ್ತಿ-ತುಮಕೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಾರ್ಗ.

| ಕ್ರ.ಸಂ | ತಾಲ್ಲೂಕು | ಗ್ರಾಮ |
|---|---|---|
| 01. | ಪಾವಗಡ | ಕ್ಯಾತಗಾನಚರ್ಲು |

ಇ) ಬಳ್ಳಾರಿ–ತುಮಕೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಲ್ಟಿ ಸರ್ಕ್ಯೂಟ್ ಮಾರ್ಗ.

| ಕ್ರ.ಸಂ | ತಾಲ್ಲೂಕು | ಗ್ರಾಮ |
|---|---|---|
| 01. | ಪಾವಗಡ | ಕ್ಯಾತಗಾನಚರ್ಲು, ಗೌಡತಿಮ್ಮನಹಳ್ಳಿ |

03. ದಿನಾಂಕ:15.10.2015 ರಂದು ಮಾನ್ಯ ಭಾರತ ಸರ್ಕಾರದ ಇಂಧನ ಸಚಿವಾಲಯವು ನೀಡಿರುವ ಮಾರ್ಗಸೂಚಿಯನ್ವಯ, ಸಂಬಂಧಪಟ್ಟ ರಾಜ್ಯ ಸರ್ಕಾರ ಮತ್ತು ಕೇಂದ್ರಾಡಳಿತ ಪ್ರದೇಶಗಳು ಸದರಿ ಮಾರ್ಗಸೂಚಿಯನ್ನು ಅಳವಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ. ಹಾಗೆಯೇ ಟವರ್ ಜಾಗಕ್ಕೆ ಮಾರ್ಗಸೂಚಿ ದರದ ಮೇಲೆ ಶೇಖಡ 85ರಷ್ಟು ಮತ್ತು ಕಾರಿಡಾರ್ ಜಾಗಕ್ಕೆ ಮಾರ್ಗಸೂಚಿ ದರದ ಮೇಲೆ ಶೇಖಡ 15ರಷ್ಟು ಭೂ ಪರಿಹಾರವನ್ನು ಪಾವತಿ ಮಾಡಬೇಕೆಂದು ಸಹ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ. ಅದೇರೀತಿ ಕೇಂದ್ರ ಸರ್ಕಾರದ ಸಭಾ ನಡವಳಿಯಲ್ಲಿ ಕರ್ನಾಟಕ ಪ್ರತಿನಿಧಿಗಳ ಹೇಳಿಕೆ ಮತ್ತು ಕರ್ನಾಟಕ ಸರ್ಕಾರದ ಇಂದನ ಇಲಾಖೆಯ ಪತ್ರ ಸಂಖ್ಯೆ ಇಎನ್ 2ವಿಎಸ್‌ಸಿ.2015 ದಿನಾಂಕ:29-08- 2015 ಕವಿಪ್ರನಿನಿ ಆದೇಶ ದಿನಾಂಕ:07-09-2015 ಮತ್ತು ಇಂದನ ಇಲಾಖೆ ಇತ್ತೀಚೆಗೆ ನೀಡಿರುವ ಸ್ಪಷ್ಟೀಕರಣವನ್ನು ಕೂಡ ಗಣನೆಗೆ ತೆಗೆದುಕೊಳಬೇಕಾಗಿರುತ್ತದೆ.

ಈ ಮೇಲೆ ವಿವರಿಸಿದ ಅಂಶಗಳ ಮೇರೆಗೆ ಹಾಗೂ ಪವರ್‌ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿ. ಇವರ ಮನವಿಯ ಮೇರೆಗೆ ಈ ಕೆಳಕಾಣಿಸಿದಂತೆ ಆದೇಶ ಮಾಡಲಾಗಿದೆ.

## ಆದೇಶ

ವಿದ್ಯುಚ್ಛಕ್ತಿ ಕಾಯ್ದೆ-2003, ಟೆಲಿಗ್ರಾಫ್ ಕಾಯ್ದೆ-1885 ಮತ್ತು ವಿದ್ಯುತ್ ಪ್ರಸರಣ ಮಾರ್ಗಗಳ ಅಳವಡಿಕೆಯ ಅವಶ್ಯಕತೆಯನ್ನು ಪರಿಗಣಿಸಿ ಟೆಲಿಗ್ರಾಫ್ ಕಾಯ್ದೆ-1885ರ ಸೆಕ್ಷನ್-16 ರಂತೆ ಈ ಕೆಳಕಾಣಿಸಿದಂತೆ ಪರಿಹಾರವನ್ನು ನಿಗದಿಪಡಿಸಿ ಆದೇಶಿಸಲಾಗಿದೆ.

01. ಪಾವಗಡ-ಹಿರಿಯೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗ.

| ಟವರ ವಿಧ | ನಿಗದಿಪಡಿಸಲಾದ ಪರಿಹಾರ ಮೊತ್ತರೂ ಲಕ್ಷಗಳಲ್ಲಿ |
|---|---|
| "A" ವಿಧ | 2.25 |
| "B" ವಿಧ | 2.50 |
| "C" ವಿಧ | 3.00 |
| "D" ವಿಧ | 4.00 |

02. ಗುತ್ತಿ-ತುಮಕೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಾರ್ಗ.

| ಟವರ ವಿಧ | ನಿಗದಿಪಡಿಸಲಾದ ಪರಿಹಾರ ಮೊತ್ತರೂ ಲಕ್ಷಗಳಲ್ಲಿ |
|---|---|
| "A" ವಿಧ | 2.25 |
| "B" ವಿಧ | 2.50 |
| "C" ವಿಧ | 3.00 |
| "D" ವಿಧ | 4.00 |

03. ಬಳ್ಳಾರಿ-ತುಮಕೂರು 400ಕೆವಿ ಡಬಲ್‌ಸರ್ಕಿಟ್ ವಿದ್ಯುತ್ ಪ್ರಸರಣ ಮಾರ್ಗಕ್ಕೆ ಪಾವಗಡದಿಂದ ಸಂಪರ್ಕ ಕಲ್ಪಿಸುವ ಲೈನ್ ಇನ್ ಲೈನ್ ಔಟ್ ಮಲ್ಟಿ ಸರ್ಕಿಟ್ ಮಾರ್ಗ.

| ಟವರ ವಿಧ | ನಿಗದಿಪಡಿಸಲಾದ ಪರಿಹಾರ ಮೊತ್ತರೂ ಲಕ್ಷಗಳಲ್ಲಿ |
|---|---|
| "A" ವಿಧ | 2.25 |
| "C" ವಿಧ | 3.00 |
| "D" ವಿಧ | 4.00 |

ಪವರ್ ಲೈನ್ ನಿರ್ಮಾಣದ ಹಾದಿಯಲ್ಲಿ ಬರುವ ಎಲ್ಲಾ ತರಹದ ಮರಗಳನ್ನು ಕ್ಲಾಸ್-"ಎ" ಮರಗಳೆಂದು ಪರಿಗಣಿಸಿ ಸರ್ಕಾರದ ಅಧಿಸೂಚನೆ ಮತ್ತು ಸುತ್ತೋಲೆಗಳನ್ನು ಆಧರಿಸಿ ಈ ಕೆಳಕಾಣಿಸಿದಂತೆ ಪರಿಹಾರ ನೀಡಲು ತೀರ್ಮಾನಿಸಲಾಯಿತು.

01. ಪ್ರತಿಯೊಂದು ತೆಂಗಿನ ಮರಕ್ಕೆ: ರೂ.16,314-00
02. ಪ್ರತಿಯೊಂದು ಅಡಿಕೆ ಮರಕ್ಕೆ: ರೂ.3,728-00
03. ಪ್ರತಿಯೊಂದು ಮಾವಿನ ಮರಕ್ಕೆ: ರೂ.27,862-00
04. ಪ್ರತಿಯೊಂದು ಹಲಸಿನ ಮರಕ್ಕೆ: ರೂ.14,800-00
05. ಮತ್ತು ಇತರೆ ಮರಗಳಿಗೆ ಸರ್ಕಾರ ನಿಗದಿಪಡಿಸಿರುವ ದರದಂತೆ ಪರಿಹಾರ ನೀಡುವುದರ ಶೇಕಡಾ 10ರಷ್ಟು ಎಕ್ಸ್‌ಗ್ರೇಷಿಯಾ ಪರಿಹಾರವನ್ನು ಪಾವತಿಸಲು ಸೂಚಿಸಲಾಗಿದೆ.

ಭೂ ಮಾಲೀಕರುಗಳಿಗೆ ಹಾನಿಗೊಳಗಾಗುವ ಮರಗಳು ಮತ್ತು ಬೆಳೆಗಳಿಗೆ ನೀಡುವ ಪರಿಹಾರದ ಜೊತೆಗೆ, ಪವರ್ ಲೈನ್ ಎಳೆಯುವ ಸಮಯದಲ್ಲಿ ಜಮೀನಿಗೆ ಆಗುವ ಹಾನಿ ಬಗ್ಗೆ ಪ್ರತಿ ಎಕರೆ ಜಮೀನಿಗೆ ಅಧಿಕ ಪರಿಹಾರವಾಗಿ ರೂ 2.00 ಲಕ್ಷಗಳನ್ನು (ಎರಡು ಲಕ್ಷಗಳು ಮಾತ್ರ) ಪಾವತಿಸಲು ಆದೇಶಿಸಿದೆ. ಪವರ್‌ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿ. ಕಂಪನಿಯವರು ಮೇಲೆ ವಿವರಿಸಿದ ಎಲ್ಲಾ ವಿದ್ಯುತ್ ಮಾರ್ಗಗಳ ಕಾರಿಡಾರ್‌ನ ಅಗಲ 46 ಮೀಟರ್ ಇರುವುದಾಗಿ ತಿಳಿಸಿದ್ದು, ಈ ಆಧಾರದ ಮೇಲೆ ಪರಿಹಾರವನ್ನು ಪಾವತಿಸಲು ಸೂಚಿಸಲಾಗಿದೆ.

ಕೊಳವೆಬಾವಿಗಳಿಗೆ ಪರಿಹಾರ:- ವಿದ್ಯುತ್ ಪ್ರಸರಣ ಮಾರ್ಗಗಳ ನಿರ್ಮಾಣ ಮತ್ತು ಹಾದು ಹೋಗುವ ಜಮೀನಿನಲ್ಲಿ ಬರುವ ಬೋರ್‌ವೆಲ್/ಕೊಳವೆ ಬಾವಿಗಳಿಗೆ ಹಾನಿಯಾದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಮಧುಗಿರಿ ವಿಭಾಗ ಇವರ ಅಂದಾಜಿನಂತೆ ಸೂಕ್ತ ಪರಿಹಾರ ನೀಡಲು ಪವರ್‌ಗ್ರಿಡ್ ಅಧಿಕಾರಿಗಳಿಗೆ ಸೂಚಿಸಲಾಗಿದೆ.

01. ಪವರ್‌ಗ್ರಿಡ್ ರವರು ಪವರ್ ಲೈನ್ ಅಳವಡಿಸಿರುವ ಕಾರಿಡಾರ್ ಮಧ್ಯಭಾಗದಿಂದ ಎರಡು ಕಡೆ ನಿಗದಿತ ಅಳತೆಗೆ ಬೌಂಡರಿ ನಿಗದಿಪಡಿಸಿ ಗುರುತು ಮಾಡಲು ಸೂಚಿಸಲಾಗಿದೆ.
02. ಪವರ್ ಲೈನಿಗಾಗಿ ನಿರ್ಮಾಣ ಮಾಡುವ ಟವರ್ ಮತ್ತು ಪವರ್ ಲೈನ್ ಹಾದು ಹೋಗುವ ಕಾರಿಡಾರಿನ ಜಮೀನಿನ ಮಾಲೀಕರೊಂದಿಗೆ ಜಮೀನಿನಲ್ಲಿಯೇ ಪವರ್‌ಗ್ರಿಡ್‌ರವರು ಭಾವಚಿತ್ರಗಳನ್ನು ತೆಗೆಸಿಕೊಳ್ಳತಕ್ಕದ್ದು.

ಭೂ ಮಾಲೀಕರುಗಳಿಗೆ ಈ ಕೆಳಕಂಡ ಎರಡು ಹಂತಗಳಲ್ಲಿ ಪರಿಹಾರಧನವನ್ನು ವಿತರಿಸಲು ಆದೇಶಿಸಲಾಗಿದೆ.

ಹಂತ-1: ಪ್ರಥಮ ಹಂತದಲ್ಲಿ ಪವರ್ ಲೈನ್ ಟವರ್ ನಿರ್ಮಾಣ ಮಾಡುವ ಸ್ಥಳಕ್ಕೆ ಸಂಬಂಧಿಸಿದ ಜಮೀನಿಗೆ ಟವರ್ ಅಡಿಪಾಯದ ಕಾಂಕ್ರೀಟ್ ಕಾಮಗಾರಿ ಪೂರ್ಣಗೊಂಡ ನಂತರ ಶೇಖಡಾ 50 ರಷ್ಟು ಮತ್ತು ಟವರ್ ನಿರ್ಮಾಣ ಪೂರ್ಣಗೊಂಡ ನಂತರ ಶೇಕಡಾ 50 ರಷ್ಟು ಪರಿಹಾರ ನೀಡತಕ್ಕದ್ದು.

ಹಂತ-2: ಎರಡನೇ ಹಂತದಲ್ಲಿ ಪವರ್ ಲೈನ್ ಎಳೆದ ನಂತರ ಪವರ್ ಲೈನ್ ಹಾದು ಹೋಗುವ ಜಮೀನಿನಲ್ಲಿನ ಬೆಳೆಗಳಿಗೆ ಬೆಳೆ ನಷ್ಟ ಪರಿಹಾರ, ಮರ ನಷ್ಟಪರಿಹಾರ ಮತ್ತು ಕಾರಿಡಾರ್‌ಗಳಿಗೆ ಶೇಖಡಾ.100 ರಷ್ಟು ಪರಿಹಾರವನ್ನು ಪಾವತಿಸತಕ್ಕದ್ದು.

ಸದರಿ ಆದೇಶವನ್ನು ಅನುಷ್ಠಾನಗೊಳಿಸುವನಿಟ್ಟನಲ್ಲಿ ಯಾವುದಾದರೂ ಸಹಕಾರ ಮತ್ತು ಸ್ಪಷ್ಟೀಕರಣ ಅವಶ್ಯಕತೆಯಿದ್ದಲ್ಲಿ ಜಿಲ್ಲಾಧಿಕಾರಿ ಕಾರ್ಯಾಲಯದಿಂದ ಹೊರಡಿಸಲಾಗುವುದು.

ಪರಿಹಾರ ಮೊತ್ತದ ಬಗ್ಗೆ ಮತ್ತು ಪರಿಹಾರ ಹಂಚಿಕೊಳ್ಳುವ ಬಗ್ಗೆ ಯಾವುದೇ ವ್ಯಾಜ್ಯಗಳಿದ್ದಲ್ಲಿ ಸದರಿ ವ್ಯಾಜ್ಯಗಳನ್ನು ಭಾರತೀಯ ಟೆಲಿಗ್ರಾಫ್ ಕಾಯ್ದೆ 1885 ರ ಸೆಕ್ಷನ್ 16(3) ಮತ್ತು 16(4) ರ ಅಡಿಯಲ್ಲಿ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ.

KP...
(ಕೆ.ಪಿ.ಮೋಹನ್‌ರಾಜ್) 23/8/16
ಜಿಲ್ಲಾಧಿಕಾರಿ,
ತುಮಕೂರು ಜಿಲ್ಲೆ.

ಪ್ರತಿಯನ್ನು:-

01. ಪೋಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ, ತುಮಕೂರು ಇವರಿಗೆ ಮಾಹಿತಿಗಾಗಿ ಮತ್ತು ಪವರ್‌ಗ್ರಿಡ್ ಅಧಿಕಾರಿಗಳು ಕಾಮಗಾರಿ ನಿರ್ವಹಿಸುವ ಸಮಯದಲ್ಲಿ ಉಂಟಾಗುವ ಅಡಚಣೆಗಳಿಗೆ ಅವಶ್ಯಕವಿದ್ದಲ್ಲಿ ಸೂಕ್ತ ರಕ್ಷಣೆ ಒದಗಿಸಲು ಮತ್ತು ಕ್ರಮಕೈಗೊಳ್ಳಲು.
02. ಡೆಪ್ಯೂಟಿ ಜನರಲ್ ಮೇನೇಜರ್, ಪವರ್‌ಗ್ರಿಡ್, ಪಾವಗಡ ಇವರ ಮಾಹಿತಿಗಾಗಿ.
03. ಉಪವಿಭಾಗಾಧಿಕಾರಿ, ಮಧುಗಿರಿ ಉಪವಿಭಾಗ ಇವರ ಮಾಹಿತಿಗಾಗಿ.
04. ತಹಶೀಲ್ದಾರ್, ಪಾವಗಡ ತಾಲ್ಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
05. ಕಛೇರಿ ಪ್ರತಿ.